ರಾಮಪುರ ಏತ ನೀರಾವರಿ ಯೋಜನೆ ಕುರಿತು.

2004 - ಶ್ರೀ ಅಮರೇಗೌಡ ಪಾಟೀಲ (ಲಿಂಗಸುರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಮಪುರ ಏತ ನೀರಾವರಿ ಯೋಜನೆ ಕಾಮಗಾರಿ ಕೆಲಸ ಯಾವ ವರ್ಷದಿಂದ ಪ್ರಾರಂಭಗೊಂಡಿದೆ.

ಆ) ಈ ಯೋಜನೆಗಾಗಿ ಇಲ್ಲಿಯವರೆಗೂ ಎಷ್ಟು ಹಣ ಮಂಜೂರು ಮಾಡಲಾಗಿದೆ.

ಇ) ಈ ವರ್ಷದ ಆಯವ್ಯಯದಲ್ಲಿ ಎಷ್ಟು ಹಣ ಒದಗಿಸಲಾಗಿದೆ. ಇದರ ಅಂದಾಜು ವೆಚ್ಚ ಎಷ್ಟು.

ಈ) ಈ ಯೋಜನೆಯಲ್ಲಿ ಅಲ್ಪ ಸ್ವಲ್ಪ ಬದಲಾವಣೆ ಮಾಡುವುದರಿಂದ ಹೆಚ್ಚಿನ ಕ್ಷೇತ್ರಕ್ಕೆ ನೀರೊದಗಿಸಲು ಸಾಧ್ಯತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ. ಇಲ್ಲದಿದ್ದಲ್ಲಿ ಈಗಲಾದರೂ ಬದಲಾವಣೆಗಾಗಿ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ರಾಮಪುರ ಏತ ನೀರಾವರಿ ಯೋಜನೆ ಕಾಮಗಾರಿಯ ಮುಖ್ಯ ಸ್ಥಾವರದ ಕೆಲಸವನ್ನು 95-96ನೇ ವರ್ಷದಿಂದ ಕೈಗೊಳ್ಳಲಾಗಿದೆ.

ಆ) ಈ ಯೋಜನೆಗಾಗಿ ಇಲ್ಲಿಯವರೆಗೆ ರೂ. 93.38 ಲಕ್ಷ ಹಣ ಮಂಜೂರು ಮಾಡಲಾಗಿದೆ.

ಇ) ಈ ವರ್ಷದ ಆಯವ್ಯಯದಲ್ಲಿ ರೂ. 25 ಲಕ್ಷ ಹಣ ಒದಗಿಸಲಾಗಿದೆ. ಈ ಯೋಜನೆಯ ಒಟ್ಟು ಅಂದಾಜು ರೂ. 114.00 (1986-87) ಕೋಟಿ ಇರುತ್ತದೆ. ಆದರೆ, ಈಗ ಕೈಗೊಂಡಿರುವ ನೀರೆತ್ತುವ ಮುಖ್ಯ ಸ್ಥಾವರಗಳ ಕಾಮಗಾರಿಯ ಅಂದಾಜು ರೂ. 4.30 ಕೋಟಿ ರೂ. ಇರುತ್ತದೆ.

ಈ) ಕೃಷ್ಣ ಮೇಲ್ದಂಡೆ ಯೋಜನೆ ಕೆಳಗಿನ ಪ್ರತಿ ಉಪ ಯೋಜನೆಗೆ ನಿರ್ದಿಷ್ಟವಾದ ನೀರಿನ ಹಂಚಿಕೆ ಆಗಿರುತ್ತದೆ. ಆದುದರಿಂದ ಈ ಯೋಜನೆಗೆ ಹೆಚ್ಚಿನ ನೀರು ಇಲ್ಲದೇ ಅಧಿಕ ಕ್ಷೇತ್ರಕ್ಕೆ ನೀರು ಒದಗಿಸುವುದು ಸಾಧ್ಯವಾಗುವುದಿಲ್ಲ.

ಕೆ.ಎ.ಎಸ್, ಕೆ.ಪಿ.ಎಸ್. ಮತ್ತು ಕೆ.ಎಫ್. ಎಸ್, ರವರಿಗೆ ಬಡ್ತಿಯ ಬಗ್ಗೆ

2376 - ಶ್ರೀ ಆಯನೂರು ಮಂಜುನಾಥ್ (ಹೊಸನಗರ) : ಮಾನ್ಯ ಮುಖ್ಯಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕದಲ್ಲಿ ಕೆಎಎಸ್, ಕೆಪಿಎಸ್, ಕೆಎಫ್ಎಸ್‌ನವರಿಗೆ ಶೇಕಡಾವಾರು ಬಡ್ತಿ ನೀಡಿಕೆಯಲ್ಲಿ ಎಷ್ಟು ಪ್ರಮಾಣದಲ್ಲಿ (ಶೇಕಡ) ನೀಡಲಾಗುತ್ತಿದೆ?

ಆ) ಕಳೆದ ಮೂರು ವರ್ಷದಲ್ಲಿ ರಾಜ್ಯದ ಶೇಕಡವಾರು ನಿಯಮದನ್ವಯ ಎಷ್ಟು ಜನರಿಗೆ ಬಡ್ತಿ ನೀಡಲಾಗಿದೆ(ವಿವರವಾದ ಪಟ್ಟಿಯನ್ನು ನೀಡಲಾಗುವುದೇ)

ಇ) ಅಡಳಿತ ಭಾಷೆಯಾಗಿ ಕನ್ನಡವನ್ನು ಪರಿಣಾಮಕಾರಿಯಾಗಿ ಜಾರಿಯಾಗುವ ದಿಸೆಯಲ್ಲಿ ಕನ್ನಡಿಗ ಅಧಿಕಾರಿಗಳು ಉನ್ನತ ಸ್ಥಾನದಲ್ಲಿರುವುದು ಸಮಂಜಸವಲ್ಲವೆ?

ಈ) ಹಾಗಿದ್ದಲ್ಲಿ, ಈಗಿರುವ ಭಾರತೀಯ ಸೇವೆ ಮತ್ತು ಕರ್ನಾಟಕ ಆಡಳಿತ ಸೇವೆಯಲ್ಲಿ ಬಡ್ತಿ ಪ್ರಮಾಣವನ್ನು ಶೇಕಡವಾರು ಹೆಚ್ಚಿಸಲು ಸರ್ಕಾರ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು)